K-tech

भारतीय विज्ञान संस्थान

KSCST

ಸೈಸೆಕ್ ಸೈಬರ್ ಸೆಕ್ಯುರಿಟಿ ಕರ್ನಾಟಕ | ಕೆ-ಟೆಕ್ ಉನ್ನತಜ್ಞಾನ ಕೇಂದ್ರ

CySecK Cyber Security Karnataka | K-Tech CoE for Cyber Security

# ಸೈಬರ್ ವಾರ್ತಿಕ

## ಜುಲೈ 2023 ಸಂಚಿಕೆ

# CYBER VARTIKA

## JULY 2023 EDITION

### ಈ ಸಂಚಿಕೆಯಲ್ಲಿ

- ಮುನ್ನುಡಿ
- ಸಂಗ್ರಹಿಸಿದ ಸುದ್ದಿ
- ಸೈಸೆಕ್ ವರದಿ

### IN THIS ISSUE

- Foreword
- Curated News
- CySecK updates

ಸೈಬರ್ ವಾರ್ತಿಕಾವನ್ನು ನಿಮ್ಮ ಸ್ನೇಹಿತರು ನಿಮಗೆ ಕಳಿಸಿದ್ದಲ್ಲಿ, ಪ್ರತಿ ತಿಂಗಳು ಅದನ್ನು ನೇರವಾಗಿ ಪಡೆಯಲು, ನಮ್ಮ ಸುದ್ದಿಪತ್ರಿಕೆಯ ಮುಕ್ತ ಚಂದಾದಾರರಾಗಿ!
*https://zcmp.in/BH6y*

If Cyber Vartika was forwarded to you by a friend, get it directly every month by SUBSCRIBING HERE!
https://zcmp.in/BH6y

CySeck CoE | CySecK | @CySecKCoE | CySeck CoE | CySecK | CySecK | CySecKCoE | Koo App @CySecK

# ಮುನ್ನುಡಿ | FOREWORD



**ಶ್ರೀಧರ್**
**ಸೀನಿಯರ್ ವೈಸ್‌ಪ್ರೆಸಿಡೆಂಟ್ ಅಂಡ್ ಹೆಡ್ ಆಫ್ ಇನ್‌ಫಾರಮೇಷನ್ ಸೆಕ್ಯುರಿಟಿ**
**CoinDCX**

ಆತ್ಮೀಯ ಸೈಬರ್ ವಾರ್ತಿಕಾ ಓದುಗರೇ,

ದೇಶಾದ್ಯಂತ ಮಳೆಗಾಲ ಚುರುಕುಗೊಂಡಿದ್ದು, ಬೇಸಿಗೆಯ ಬಿಸಿಲಿನಿಂದ ಕಾದಿದ್ದ ಧರೆಗೆ ಪರಿಹಾರೋಪಾದಿಯಲ್ಲಿ ವರುಣ ತಂಪೆರೆದಿದ್ದಾನೆ. ನಾನು, ನಮ್ಮ ಸೈಬರ್ ವಾರ್ತಿಕ ಸುದ್ದಿಪತ್ರದ ಜುಲೈ ಆವೃತ್ತಿಗೆ, ಗೌರವಾನ್ವಿತ ಓದುಗರಿಗೆ ಬೆಚ್ಚಗಿನ ಮತ್ತು ತಂಪಾದ ಸ್ವಾಗತವನ್ನು ನೀಡುತ್ತೇನೆ.

ಡಿಜಿಟಲ್ ಕ್ರಾಂತಿಯಿಂದಾಗಿ, ಡಿಜಿಟಲ್ ಯುಗದಲ್ಲಿ ಮಿತಿಇಲ್ಲದಷ್ಟು ಅವಕಾಶಗಳು ತೆರೆದುಕೊಂಡಿವೆ. ಡಿಜಿಟಲೀಕರಣ ಊಯಿಸಲೂ ಸಾಧ್ಯವಾಗದಷ್ಟು ನಮ್ಮನ್ನು ಸುತ್ತುವರೆದುಬಿಟ್ಟಿದೆ. ನಾವು ನಮ್ಮ ಡಿಜಿಟಲ್ ಹೆಜ್ಜೆಗುರುತನ್ನು ವಿಸ್ತರಿಸಿದಂತೆ, ಸೈಬರ್ ಸುರಕ್ಷತೆಯ ಬಗ್ಗೆ ತಿಳಿದುಕೊಳ್ಳುವ ಅಗತ್ಯವೂ ಹೆಚ್ಚಾಗಿದೆ.

ಸೈಬರ್ ವಾರ್ತಿಕಾದ ಮೌಲ್ಯಯುತ ಓದುಗರೇ, ಸೈಬರ್ ಕ್ಷೇತ್ರೆವು ನಿರಂತರವಾಗಿ ವಿಕಸನಗೊಳ್ಳುತ್ತಿರುವ ಕ್ಷೇತ್ರವಾಗಿದೆ. ಈ ಕ್ಷೇರ್ತದ ಬಗ್ಗೆ ನಿಮ್ಮನ್ನು ಸಬಲೀಕರಣಗೊಳಿಸುವ ಜೊತೆಗೆ ಸೈಬರ್ ಸುರಕ್ಷತೆ ಬಗ್ಗೆ ಶಿಕ್ಷಣ ನೀಡುವುದು ಸೈಬರ್ ವಾರ್ತಿಕಾದ ಮುಖ್ಯ ಧ್ಯೇಯವಾಗಿದೆ. ಈ ಸುದ್ದಿಪತ್ರವು ನಿಮ್ಮ ಮಾರ್ಗದರ್ಶಿ ಬೆಳಕಾಗಿ ಕಾರ್ಯನಿರ್ವಹಿಸುತ್ತದೆ. ಡಿಜಿಟಲ್ ಯುಗದಲ್ಲಿನ ಜಟಿಲತೆಗಳನ್ನು ಎದುರಿಸುವ ಬಗ್ಗೆ ಮತ್ತು ಸುರಕ್ಷಿತ ಅಭ್ಯಾಸಗಳನ್ನು ರೂಢಿಸಿಕೊಳ್ಳುವ ಬಗ್ಗೆ ಮಾರ್ಗದರ್ಶನ ನೀಡುತ್ತದೆ.

ನಾವು ಈ ತಿಂಗಳ ನಮ್ಮ ಸಂಚಿಕೆಯಲ್ಲಿ ನಿಮಗೆ ತರುವ ಕಥೆಗಳು ಡಿಜಿಟಲ್ ಕ್ಷೇತ್ರದಲ್ಲಿ ನಮ್ಮನ್ನು ನಾವು ಹೇಗೆ ಸುರಕ್ಷಿತವಾಗಿಟ್ಟುಕೊಳ್ಳಬೇಕು ಎಂಬ ಗಂಭೀರತೆಯನ್ನು ಹೇಳುತ್ತವೆ. ಗಮನಹರಿಸಬೇಕಾದ ನಿರ್ಣಾಯಕ ಅಂಶಗಳೆಂದರೆ, ಮೋಬೈಲ್ ಅಪ್ಲಿಕೇಷನ್‌ಗಳ ಸುರಕ್ಷಿತ ಬಳಕೆ. ಗೂಗಲ್ ಪ್ಲೇಸ್ಟೋರ್/ಆಪಲ್ ಸ್ಟೋರ್‌ನಂತಹ ಪ್ರತಿಷ್ಠಿತ ಮೂಲಗಳಿಂದ ಮಾತ್ರ ಅಪ್ಲಿಕೇಷನ್‌ಗಳನ್ನು ಡೌನ್‌ಲೋಡ್ ಮಾಡಿ, ಡೌನ್‌ಲೋಡ್ ಮಾಡುವಾಗ ನಿಮ್ಮ ವೈಯಕ್ತಿಕ ಡೇಟಾವನ್ನು ರಕ್ಷಿಸಲು ಅನುಮತಿಗಳನ್ನು ಎಚ್ಚರಿಕೆಯಿಂದ ನೀಡಿ. ನಿಯಮಿತವಾಗಿ ನಿಮ್ಮ ಡಿವೈಸ್/ಸಾಫ್ಟ್‌ವೇರ್‌ಗಳನ್ನು ನವೀಕರಿಸುವ ಮೂಲಕ ಸೈಬರ್ ನೈರ್ಮಲ್ಯ ಅಭ್ಯಾಸಗಳನ್ನು ರೂಡಿಸಿಕೊಂಡು ಜಾಗೃತರಾಗಿರಿ. ನಿಮ್ಮ ಗೌಪ್ಯತೆ ಸೆಟ್ಟಿಂಗ್ ಗಳು ಸುರಕ್ಷಿತವಾಗಿವೆ ಎಂದು ಖಚಿತಪಡಿಸಿಕೊಳ್ಳಿ, ನೀವು ಹಂಚಿಕೊಳ್ಳುವ ಮಾಹಿತಿಯ ಬಗ್ಗೆ ಜಾಗರೂಕರಾಗಿರಿ ಮತ್ತು ಅನುಮಾನಾಸ್ಪದ ಖಾತೆಗಳ ಬಗ್ಗೆ ಜಾಗರೂಕರಾಗಿರಿ. ಈ ಸಂದರ್ಭದಲ್ಲಿ ವ್ಯಾಪಕವಾಗಿ ಹರಡಿರುವ ಬ್ಯಾಂಕಿಂಗ್ ವಂಚನೆಗಳ ಬಗ್ಗೆಯೂ ನಾನು ಗಮನಸೆಳೆಯ ಬಯಸುತ್ತೇನೆ. ಸೂಕ್ಷ್ಮ ಬ್ಯಾಂಕಿಂಗ್ ಮಾಹಿತಿಯನ್ನು ಹಂಚಿಕೊಳ್ಳುವ ಬಗ್ಗೆ ಯಾವಾಗಲೂ ಜಾಗರೂಕರಾಗಿರಿ ಮತ್ತು ವೈಯಕ್ತಿಕ ವಿವರಗಳನ್ನು ಕೇಳುವ ಅನಪೇಕ್ಷಿತ ಸಂದೇಶಗಳಿಗೆ ಎಂದಿಗೂ ಪ್ರತಿಕ್ರಿಯಿಸಬೇಡಿ.

ನಿಮ್ಮ ಸಮುದಾಯಗಳಲ್ಲಿ ಸೈಬರ್ ಭದ್ರತೆ ಜಾಗೃತಿಯ ಪ್ರತಿಪಾದಕರಾಗಲು ನಾನು ನಿಮ್ಮಲ್ಲಿ ಪ್ರತಿಯೊಬ್ಬರನ್ನು ಪ್ರೋತ್ಸಾಹಿಸುತ್ತೇನೆ. ಸುರಕ್ಷಿತ ಮೊಬೈಲ್ ಅಪ್ಲಿಕೇಶನ್ ಬಳಕೆ, ಜವಾಬ್ದಾರಿಯುತ ಸಾಮಾಜಿಕ ಮಾಧ್ಯಮ ಅಭ್ಯಾಸಗಳು ಮತ್ತು ಅನುಮಾನಾಸ್ಪದ ಕೊಡುಗೆಗಳ ಬಗ್ಗೆ ಅನುಮಾನ ವ್ಯಕ್ತಪಡಿಸುವುದರ ಮಹತ್ವದ ಬಗ್ಗೆ ನಿಮ್ಮ ಸುತ್ತಲಿನವರನ್ನು ಸಬಲೀಕರಿಸುವುದು ಇತ್ಯಾದಿ.

ಸೈಬರ್ ವರ್ತಿಕಾ ತಂಡದ ಪರವಾಗಿ, ನಮ್ಮ ಪ್ರಯತ್ನದಲ್ಲಿ ನಿಮ್ಮ ನಿರಂತರ ಬೆಂಬಲ ಮತ್ತು ನಂಬಿಕೆಗಾಗಿ ನಾನು ನಮ್ಮ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಮುಂಬರುವ ತಿಂಗಳು ನಿಮಗೆ ಸುರಕ್ಷಿತವಾಗಿರಲಿ ಎಂದು ಹಾರೈಸುತ್ತೇನೆ!"

**Sridhar**
**Senior Vice President and Head of Information Security**
**CoinDCX**

Dear Cyber Vartika Readers,

As the monsoon casts its refreshing spell across India, bringing relief from the summer heat, I, extend a warm and rain-soaked welcome to our esteemed readers to the July edition of our Cyber Vartika Newsletter.

The digital revolution has opened up boundless opportunities, connecting us in ways that were once unimaginable. However, as our digital footprint expands, so does the importance of cybersecurity awareness.

Cyber Vartika's core intention remains steadfast - to empower and educate you, our valued readers, about the ever-evolving realm of cybersecurity. This newsletter serves as your guiding light, navigating through the intricacies of the digital domain and illuminating the best practices to stay secure in an increasingly interconnected world.

As we embark on this month's journey, the stories we bring to you underscore the gravity of safeguarding ourselves in the digital realm. One crucial aspect that demands attention is the safe use of mobile apps. Stay vigilant by downloading apps from reputable sources, regularly updating them, and carefully scrutinizing permissions to protect your personal data.
Ensure your privacy settings are secure, be mindful of the information you share, and stay wary of suspicious accounts. I also want to draw attention to the ever-pervasive threat of banking fraud. Always be cautious about sharing sensitive banking information and never respond to unsolicited messages asking for personal details.

I encourage each of you to become advocates of cybersecurity awareness within your communities. Empower those around you with knowledge about safe mobile app usage, responsible social media practices, and the importance of being skeptical about suspicious offers.

On behalf of the Cyber Vartika team, I extend our heartfelt gratitude for your continued support and trust in our endeavour.

Wishing you a safe and secure month ahead!"

# ಪ್ರಮುಖ ಸೈಬರ್ ಸುದ್ದಿ

## ಸರ್ಕಾರಿ ಯೋಜನೆಗಳ ನೊಂದಣಿಗೆ ಫೇಕ್ ಅಪ್ಲಿಕೇಷನ್ಸ್‌ಗಳ ಹಾವಳಿ: ಬೆಂಗಳೂರು ಸೈಬರ್ ಪೋಲೀಸರಿಂದ ಎಚ್ಚರಿಕೆ




ಸಾರ್ವಜನಿಕರು ಸರ್ಕಾರ ಸೂಚಿಸಿದ ಪೋರ್ಟಲ್ ಮೂಲಕ ಮಾತ್ರ ಯೋಜನೆಗಳಿಗೆ ನೋಂದಾಯಿಸಲು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ಅನ್ಯ ಲಿಂಕ್‌ಗಳು ಅಥವಾ ಅಪ್ಲಿಕೇಶನ್‌ಗಳ ಮೇಲೆ ಕ್ಲಿಕ್ ಮಾಡದಂತೆ ಪೋಲೀಸರು ಎಚ್ಚರಿಕೆ ನೀಡಿದ್ದಾರೆ. ಏಕೆಂದರೆ ಸೈಬರ್ ಅಪರಾಧಿಗಳು ಈ ಅನಧಿಕೃತ ಅಪ್ಲಿಕೇಶನ್‌ಗಳನ್ನು ಬಳಸುವ ಅರ್ಜಿದಾರರ ಡೇಟಾದಿಂದ ಲಾಭ ಪಡೆಯಲು ಪ್ರಯತ್ನಿಸುತ್ತಿದ್ದಾರೆ.

**ಪರಿಶೀಲಿಸದ ಮೂಲಗಳಿಂದ ಯಾವುದೇ ಅಪ್ಲಿಕೇಶನ್‌ಗಳು ಅಥವಾ .apk ಫೈಲ್‌ಗಳನ್ನು ಡೌನ್‌ಲೋಡ್ ಮಾಡದಂತೆ CySecK ಸೂಚಿಸುತ್ತದೆ.**

## ಸೈಬರ್ ದಾಳಿಗಳು, ರಾನ್‌ಸಮ್‌ವೇರ್ ನಿಂದ ಸರ್ಕಾರಿ ಡೇಟಾವನ್ನು ರಕ್ಷಿಸಲು ಮಾರ್ಗಸೂಚಿ ಹೋರಡಿಸಿದ CERT-In




ದೇಶದ ಸೈಬರ್-ಸೆಕ್ಯುರಿಟಿ ವಾಚ್‌ಡಾಗ್  ಎಂದೇ ಕರೆಸಿಕೊಳ್ಳುವ CERT – In (ಇಂಡಿಯನ್ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್) ಮಾರ್ಗಸೂಚಿಯೊಂದನ್ನು ಬಿಡುಗಡೆ ಮಾಡಿದೆ, ಇದು ಮಾಹಿತಿ ಭದ್ರತಾ ಅಭ್ಯಾಸಗಳ ಬಳಕೆ ಮತ್ತು ನಿರ್ವಹಣೆಯ ಸುತ್ತ ಮಾಡಬೇಕಾದ ಮತ್ತು ಮಾಡಬಾರದ ವಿಷಯಗಳನ್ನು ಒಳಗೊಂಡಿದೆ. ಸೈಬರ್ ಅಪಾಯವನ್ನು ಕಡಿಮೆ ಮಾಡಲು, ನಾಗರಿಕರ ಡೇಟಾವನ್ನು ರಕ್ಷಿಸಲು ಮತ್ತು ದೇಶದಲ್ಲಿ ಸೈಬರ್ ಭದ್ರತಾ ಪರಿಸರ ವ್ಯವಸ್ಥೆಯನ್ನು ಸುಧಾರಿಸಲು ಸರ್ಕಾರಿ ಘಟಕಗಳು ಮತ್ತು ಉದ್ಯಮಗಳು ಅನುಸರಿಸಬೇಕಾದ ಕ್ರಮಗಳು ಈ ಮಾರ್ಗಸೂಚಿಯಲ್ಲಿದೆ.



## WhatsApp ಪಿಂಕ್ ಹಗರಣ: ಜನರಿಗೆ ಎಚ್ಚರವಾಗಿರಲು ತಿಳಿಸಿದ ಸೈಬರ್ ಸೆಲ್

WhatsApp ಗ್ರೀನ್ ಟಿಕ್‌ನ ಹೆಚ್ಚುವರಿ ವೈಶಿಷ್ಟ್ಯವೆಂದು ಹೇಳಿಕೊಂಡು ವಂಚಕರು "WhatsApp ಪಿಂಕ್" ಲಿಂಕ್ ಅನ್ನು ಬಳಕೆದಾರರಿಗೆ ಕಳುಹಿಸುತ್ತಿದ್ದಾರೆ. ಹೀಗೆ ಬಂದ ಲಿಂಕ್ ಅನ್ನು ಒಮ್ಮೆ ಕ್ಲಿಕ್ ಮಾಡಿದರೆ, ವಂಚಕರು ಬಳಕೆದಾರರ ವೈಯಕ್ತಿಕ ಮಾಹಿತಿಯ ಮೇಲೆ ಸಂಪೂರ್ಣ ಹಿಡಿತ ಸಾಧಿಸುತ್ತಾರೆ.ಇಂತಹ ಯಾವುದೇ ಸಂದೇಶಗಳನ್ನೊಳಗೊಂಡ ಲಿಂಕ್ ನಿಮಗೆ ಬಂದರೆ ಅಂತಹವುಗಳನ್ನು ನಿರ್ಲಕ್ಷಿಸಿ.

**Google Playstore ಅಥವಾ Apple App Store ನಂತಹ ವಿಶ್ವಾಸಾರ್ಹ ಅಪ್ಲಿಕೇಶನ್ ಸ್ಟೋರ್‌ಗಳಿಂದ ಮಾತ್ರ Whatsapp ಅಪ್ಲಿಕೇಶನ್ ಅನ್ನು ಡೌನ್‌ಲೋಡ್ ಮಾಡಲು CySecK ಸೂಚಿಸುತ್ತದೆ.**

## "ಬಹುಪಕ್ಷೀಯ ಸಹಕಾರವು ಯಶಸ್ಸಿನ ಕೀಲಿ " ಸೈಬರ್ ಅಪರಾಧ ಮತ್ತು ಭದ್ರತೆ ಕುರಿತು ಜಿ20 ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅಮಿತ್ ಶಾ

G೨೦ ಸಭೆಯನ್ನುದ್ದೇಶಿಸಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು "ಡೈನಾಮೈಟ್‌ನಿಂದ ಮೆಟಾವರ್ಸ್" ಮತ್ತು "ಹವಾಲಾದಿಂದ ಕ್ರಿಪ್ಟೋಕರೆನ್ಸಿ" ಗೆ ವಿಕಸನಗೊಂಡಿರುವ ನಮಗೆ ಭದ್ರತಾ ಸವಾಲುಗಳ ಜಾಗತಿಕ ಸಮುದಾಯವನ್ನು ಬೆಂಬಿಡದೆ ಕಾಡುತ್ತಿವೆ. G20 ದೇಶಗಳು "ಅಂತಹ ಅಪರಾಧಗಳ ವಿರುದ್ಧ ಕ್ರಮ ಕೈಗೊಳ್ಳಲು ಸಾಂಪ್ರದಾಯಿಕ ಗಡಿಗಳನ್ನು ಮೀರಿ" ಮುಂದೆಬರಬೇಕಿದೆ ಎಂದು ತಮ್ಮ ಅಭಿಪ್ರಾಯ ಹೊರಹಾಕಿದರು.

## ಸೈಬರ್ ಕಳ್ಳರ ಕಾಟ: ಸಾಮೂಹಿಕ ಆತ್ಮಹತ್ಯೆಗೆ ಶರಣಾದ ಕುಟುಂಬ



ಅರೆಕಾಲಿಕ ಉದ್ಯೋಗ ಮಾಡುವಂತೆ ವ್ಯಕ್ತಿಯೊಬ್ಬರಿಗೆ ಬಂದ ಸಂದೇಶದಂತೆ ಆತ ಕೆಲಸಮಾಡಲು ಆರಂಬಿಸುತ್ತಾನೆ. ಹೀಗೆ ಕೆಲಸ ಮಾಡುವ ವೇಳೆ ಹೆಚ್ಚಿನ ಲಾಭ ನೀಡುವುದಾಗಿ ಹೇಳಿ ಈತನ ಬ್ಯಾಂಕ್ ಮಾಹಿತಿಯನ್ನು ಪಡೆದ ವಂಚಕರು ಈತನ ಖಾತೆಯಲ್ಲಿದ್ದ ಸಂಪೂರ್ಣ ಹಣವನ್ನು ಲೂಟಿ ಹೊಡೆದಿದ್ದಾರೆ. ಕೆಲಸ ಮಾಡುವ ವೇಳೆ ವಂಚಕರು ಸಂತ್ರಸ್ತನ ಕಂಪ್ಯೂಟರ್‌ಅನ್ನು ಹ್ಯಾಕ್ ಮಾಡಿ ಆತನ ಎಲ್ಲಾ ಮಾಹಿತಿಯನ್ನು ಕದ್ದು ಸಂತ್ರಸ್ತನ ಹೆಸರಿನಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ನಕಲಿ ಖಾತೆಗಳನ್ನು ಸೃಜಿಸಿ ಹಿಂಸೆ ನೀಡಲಾರಂಬಿಸಿದ ಕಾರಣ, ವ್ಯಕ್ತಿ ತನ್ನ ಪತ್ನಿ ಹಾಗೂ ತನ್ನಿಬ್ಬರು ಅಪ್ರಾಪ್ತ ಮಕ್ಕಳಿಗೆ ವಿಷಉಣಿಸಿ ತಾವೂ ಸಹ ನೇಣಿಗೆ ಶರಣಾದ ಘಟಣೆ ಭೂಪಾಲ್‌ನಲ್ಲಿ ನಡೆದಿದೆ.

**ಯಾವುದೇ ಅರೆಕಾಲಿಕ ಉದ್ಯೋಗದ ಆಮಿಷಗಳಿಗೆ ಬಲಿಯಾಗದಂತೆ CySecK ಸೂಚಿಸುತ್ತದೆ. ಎಚ್ಚರಿಕೆಯಿಂದ ಪರಿಶೀಲಿಸದೆ ಆನ್‌ಲೈನ್‌ನಲ್ಲಿ ನಿಮ್ಮನ್ನು ಸಂಪರ್ಕಿಸುವ ಯಾರನ್ನೂ ನಂಬಬೇಡಿ ಮತ್ತು ಅವರಿಗೆ ನಿಮ್ಮ ಸೂಕ್ಷ್ಮ ಡೇಟಾಗೆ ಪ್ರವೇಶವನ್ನು ಒದಗಿಸಬೇಡಿ ಎಂದು ಸೈಸೆಕ್ ಸಲಹೆ ನೀಡುತ್ತದೆ.**

## Windows  Linux ಮೇಲೆ Akira Ransomware virus ದಾಳಿ: ಎಚ್ಚರಿಕೆ ನೀಡಿದ CERT-In

Akira ಎಂಬ ಹೆಸರಿನ ಹೊಸ Ransomware virus ದೇಶಾದ್ಯಂತ ಸಕ್ರಿಯವಾಗಿದ್ದು, ಇದು Windows and Linux ಆಧಾರಿತ ಎಲ್ಲಾ ಸಿಸ್ಟಂಗಳ ಮೇಲೆ ದಾಳಿ ಮಾಡಲು ಸಿದ್ಧವಿದ್ದು, ಜಾಗೃತರಾಗಿರುವಂತೆ CERT-In ಎಚ್ಚರಿಕೆ ನೀಡಿದೆ. ಈ ದುರುದ್ದೇಶಪೂರಿತ ಸಾಫ್ಟ್‌ವೇರ್ ಎನೀ ಡೆಸ್ಕ್ ಅಕ್ಸೆಸ್ ತೆಗೆದುಕೊಂಡು ಯಾರೆಲ್ಲಾ ೨FA ಯನ್ನು ಅಳವಡಿಸಿಕೊಂಡಿಲ್ಲವೂ ಅಂತಹವರ ದಾಖಲೆಗಳನ್ನು ಕದ್ದುdark web blog ನಲ್ಲಿ ಹರಿಬಿಡುವ ಬೆದರಿಕೆ ಒಡ್ಡುತ್ತಿರುವ ಬಗ್ಗೆ ಮಾಹಿತಿ ಇರುವುದಾಗಿ ಹೇಳಿದೆ.

**ನಿಮ್ಮ ಕಂಪ್ಯೂಟರ್‌ಗಳು/ಲ್ಯಾಪ್‌ಟಾಪ್ ಅನ್ನು ಯಾವಾಗಲೂ ಅಪ್‌ಡೇಟ್ ಮಾಡಿ. ಯಾವುದೇ ಲಗತ್ತುಗಳನ್ನು ತೆರೆಯುವಾಗ ಅಥವಾ ಅಪರಿಚಿತ ಮೂಲಗಳಿಂದ ಕಳುಹಿಸಲಾದ ಲಿಂಕ್‌ಗಳನ್ನು ಕ್ಲಿಕ್ ಮಾಡುವಾಗ ಜಾಗರೂಕರಾಗಿರಿ ಎಂದು ಸೈಸೆಕ್ ಸೂಚಿಸುತ್ತದೆ.**

# Top Cyber News

## Beware of apps to register for govt schemes, warns Bengaluru's cyber police




Public was advised to register for the schemes solely through the Seva Sindhu portal and avoid using external links or applications shared on social networks.

***CySecK suggests not to download any apps or .apk files from unverified sources.***

## Cyber security watchdog CERT-In issues guidelines for protection of govt data from cyberattacks, ransomware




The guidelines were issued as a roadmap that needs to be followed by the government entities and industry to reduce cyber risk, protect citizen data, and continue to improve the cyber security ecosystem in the country.



## WhatsApp Pink scam: Cyber cell asks people to stay alert

The scamsters were sending the “WhatsApp Pink” link to users and claiming it to be an additional feature of the WhatsApp green tick. The link, once clicked, helped fraudsters steal personal information of users.

***CySecK suggests to download Whatsapp app only from trusted app stores like Google Playstore or Apple App Store.***

## 'Multilateral Cooperation Key to Success': Amit Shah Inaugurates G20 Conference on Cyber Crime & Security

Union Home Minister warned the global community of security challenges which have evolved from “dynamite to metaverse" and “hawala to cryptocurrency” and urged G20 countries to “rise above conventional boundaries to act against such crimes".

## Bhopal: Family of 4 committed suicide after cyber hacking, theft; requested for collective cremation in suicide letter.



A few months back victim received a message on Whatsapp regarding online part-time work. He was in need of money, hence he started working, and the fraudsters drained all his savings by luring him for a larger amount. Fraudsters also hacked his laptop and shared their morphed pictures on social media. The company allegedly accessed his bank accounts as well.

***CySecK suggests not to fall prey to any part time job lures. Do not trust anyone who contacts you online without careful verification and do not provide them access to your sensitive data.***

## Government warns internet users of ‘AKIRA’ ransomware; hackers using AnyDesk, WinRAR, PCHunter.

'Akira' is designed to target both Windows and Linux-based systems. The attackers behind Akira first steal vital personal information from their victims and then proceed to encrypt the data on their systems. To coerce the victims into paying the ransom, they engage in double extortion tactics.

***CySecK suggests to always update your computers/laptop, be careful when opening any attachments or clicking links sent from unknown sources.***

# ಆನ್‌ಲೈನ್ ಮೋಸಗಳು

## ದೆಹಲಿ-ಎನ್‌ಸಿಆರ್ ಆಸ್ಪತ್ರೆಯ ಹೆಸರಿನಲ್ಲಿ, ನಕಲಿ ನೇಮಕಾತಿಗಳನ್ನು ಬುಕ್ ಮಾಡುವ ಮೂಲಕ ಜನರನ್ನು ವಂಚಿಸುತ್ತಿದ್ದ ಸೈಬರ್ ಪ್ರಕರಣವನ್ನು ಭೇದಿಸಿದ ಪೋಲೀಸರು.



ಸೈಬರ್ ವಂಚಕರು ದೆಹಲಿ-ಎನ್‌ಸಿಆರ್‌ನಲ್ಲಿನ ಹೆಸರಾಂತ ಆಸ್ಪತ್ರೆಯ ಹೆಸರಿನಲ್ಲಿ ನಕಲಿ ವೆಬ್‌ಸೈಟ್‌ಗಳನ್ನು ಸೃಜಿಸಿ, ಅಪಾಯಿಂಟ್‌ಮೆಂಟ್ ಬುಕಿಂಗ್ ಮತ್ತು ಸಮಾಲೋಚನೆ ನೀಡುವ ಮೂಲಕ ನೂರಾರು ಜನರನ್ನು ವಂಚಿಸಿರುವುದು ಇದೀಗ ಬೆಳಕಿಗೆ ಬಂದಿದೆ. ಆಸ್ಪತ್ರೆ ಅಪಾಯಿಂಟ್ ಮೆಂಟ್ ಬುಕ್ ಮಾಡಲು ಆ್ಯಪ್ ಇನ್ ಸ್ಟಾಲ್ ಮಾಡುವಂತೆ ಹೇಳಿ ಆಸ್ಪತ್ರೆಯ ಗ್ರಾಹಕರುಗಳಿಗೆ ಲಕ್ಷಾಂತರ ರೂಪಾಯಿಗಳನ್ನು ವಂಚಿಸುತ್ತಿದ್ದಾರೆಂದು ತನಿಖೆಯಿಂದ ತಿಳಿದುಬಂದಿದೆ.

## ಅರೆಕಾಲಿಕ ಉದ್ಯೂಗದ ಭರವಸೆ: ಯುವಕನಿಂದ ರೂ.೧೪ ಲಕ್ಷ ಲೂಟಿದ ವಂಚಕರು



೨೭ ವರ್ಷದ ವ್ಯಕ್ತಿಗೆ ಅರೆಕಾಲಿಕ ಉದ್ಯೋಗ ನೀಡುವುದಾಗಿ ಭರವಸೆ ಮೂಡಿಸಿದ ವಂಚಕ ಆತನ ವಾಟ್ಸ್‌ಆಪ್‌ಗೆ ೨ ಐ.ಡಿ ಕಾರ್ಡ್‌ಗಳನ್ನು ಕಳುಹಿಸುವ ಮೂಲಕ ನಂಬಿಕೆಯನ್ನು ಗಳಿಸಿಕೊಂಡಿದ್ದಾನೆ. ಹಲವು ದಿನಗಳಾದರೂ ವಂಚಕನಿಂದ ಯಾವುದೇ ಉತ್ತರ ಮತ್ತು ರಿಟರ್ನ್ಸ್ ಬಾರದ ಹಿನ್ನೆಲೆ ಆಶಿಶ್ ಗೆ ತಾನು ಮೋಸಹೋಗಿರುವ ಬಗ್ಗೆ ಅರಿಬಾಗಿದ್ದು, ಸದ್ಯ ದೂರನ್ನು ದಾಖಲಿಸಿದ್ದಾನೆ.

## ಅಪಾರ ಲಾಭದ ನಿರೀಕ್ಷೆಯಲ್ಲಿ ಆನ್‌ಲೈನ್ ಮೋಸದಿಂದ ರೂ.೭ಲಕ್ಷ ಕಳೆದುಕೊಂಡ ವ್ಯಕ್ತಿ



ಸಂತ್ರಸ್ತ ತಾವು ದುಡಿದ ಹಣವನ್ನೆಲ್ಲಾ ಆನ್‌ಲೈನ್‌ನಲ್ಲಿ ಹೂಡಿಕೆ ಮಾಡಿ ಸ್ವಲ್ಪ ದಿನಗಳಾದ ಬಳಿಕ ಹಣವನ್ನು ಹಿಂಪಡೆಯಲು ಹೋದಾಗ ತಾವು ರೂ.೭ ಲಕ್ಷಗಳನ್ನು ಕಳೆದುಕೊಂಡು ಮೋಸಹೋಗಿರುವುದು ಅರಿವಿಗೆ ಬಂದಿದೆ.

## 'ಬ್ಲೆಸ್‌ಕಾಯಿನ್' ವಂಚನೆ: ಮದುವೆ ಪೋರ್ಟಲ್‌ನಲ್ಲಿ ಮಹಿಳಾ ಸೈಬರ್ ವಂಚಕಿಯ ಆಮಿಷಕ್ಕೆ 91.75 ಲಕ್ಷ ರೂ. ಕಳೆದುಕೊಂಡ ಟೆಕ್ಕಿ

ಮಹಿಳಾ ಸೈಬರ್ ವಂಚಕಿ ಪುಣೆಯಲ್ಲಿ ಟೆಕ್ಕಿಯೊಬ್ಬರಿಗೆ ಮದುವೆಯಾಗುವುದಾಗಿ ಸುಳ್ಳು ಭರವಸೆ ನೀಡಿ 91.75 ಲಕ್ಷ ರೂ. ವಂಚಿಸಿದ್ದಾರೆ. ಆರೋಪಿಯು ಮಲೇಷ್ಯಾದಲ್ಲಿ ನೆಲೆಸಿರುವುದಾಗಿ ದೂರುದಾರರಿಗೆ ತಿಳಿಸಿದ್ದಾಳೆ. ಮದುವೆ ಆಗುವುದಾಗಿ ಭರವಸೆ ನೀಡಿದ ಬಳಿಕ ನಕಲಿ ದಂಧೆಗೆ ಹಣ ಕಳುಹಿಸುವಂತೆ ಒತ್ತಾಯಿಸಿದ್ದಾಳೆ. ದೂರುದಾರರು ಇಂಜಿನಿಯರ್ ಆಗಿದ್ದು, ಐಟಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

## QR ಕೋಡ್ ವಂಚನೆ ಪ್ರಕರಣ – ಉತ್ತರ ಪ್ರದೇಶ ಮೂಲದ ಆರೋಪಿಯ ಬಂಧನ

ಬಂಧಿತ ಆರೋಪಿಯು ಭುವನೇಶ್ವರ ಮೂಲದ Fintech Company ಯ ಪೇಮೆಂಟ್‌ಗೇಟ್‌ವೇಯನ್ನು ಬ್ಲಾಕ್/ಹ್ಯಾಕ್ ಮಾಡುವ ಮೂಲಕ ಕಂಪೆನಿಗೆ ಸೇರಿದ ರೂ.೧೪.೩೩ ಕೋಟಿ ರೂಗಳನ್ನು ೧೨೫ಕ್ಕೂ ಹೆಚ್ಚು ವಿವಿಧ ಬ್ಯಾಂಕ್‌ಖಾತೆಗಳಿಗೆ ವರ್ಗಾಯಿಸಿರುವುದಾಗಿ ವರದಿಯಾಗಿದೆ.

## ಪಿಜ್ಜಾ ಫ್ರಾಂಚಾಯಿಸಿ ಪಡೆಯಲು ಹೋಗಿ ರೂ. ೧ಕೋಟಿ ಕಳೆದುಕೊಂಡ ಪುಣೆಯ ವ್ಯಕ್ತಿ




ಕ್ರಿಕೆಟ್ ವಿಶ್ವಕಪ್ ನಡೆಯುವ ವೇಳೆ ಪುಣೆ, ಪುಣೆಯ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ಮುಂಬೈಗಳಲ್ಲಿ ಪಿಜ್ಜಾ ರೆಸ್ಟೋರೆಂಟ್ ಫ್ರಾಂಚಾಯಿಸಿ ನೀಡುತ್ತಿರುವುದಾಗಿ ಹೇಳಿರುವ ವಂಚಕರು ಪುಣೆಯ ಮೂಲದ ವ್ಯಕ್ತಿಯಿಂದ ರೂ.೧ಕೋಟಿ ಪಡೆದು ವಂಚಿಸಿರುವ ಪ್ರಕರಣ ಇದೀಗ ಬೆಳಕಿಗೆ ಬಂದಿದೆ. ಫ್ರಾಂಚಾಯಿಸಿ ನೀಡುವುದಾಗಿ ಹೇಳಿರುವ ವಂಚಕರು ಬೇರೆ ಬೇರೆ ಖಾತೆಗಳಿಗೆ ಆಸಕ್ತ ವ್ಯಕ್ತಿಯಿಂದ ಹಣ ಹಾಕಲು ಹೇಳಿರುವುದು ಪ್ರಾಥಮಿಕ ತನಿಖೆಯಿಂದ ಬೆಳಕಿಗೆ ಬಂದಿದೆ.

# ಆನ್‌ಲೈನ್ ಮೋಸಗಳು

## ಫೈನಾನ್ಸ್ ಪೋರ್ಟಲ್ ಹ್ಯಾಕ್: ಸಂಸ್ಥೆಯೊಂದರಿಂದ ರೂ.೨೫ ಕೋಟಿ ದೋಚಿದ ವಂಚಕರು



ಥಾಣೆ ಮೂಲದ ಕಂಪೆನಿಯೊಂದರ ಎಸ್ಕ್ರೋ ಬ್ಯಾಂಕ್ ಖಾತೆಗೆ ಪ್ರವೇಶ ಪಡೆದಿರುವ ಹ್ಯಾಕರ್‌ಗಳು ರೂ.೨೫ ಕೋಟಿಯನ್ನು ಲೂಟಿ ಹೊಡಿದಿದ್ದಾರೆ. ಕಂಪೆನಿಯ ಪೇಮೆಂಟ್ ಗೇಟ್‌ವೇ ಗೆ ಪ್ರವೇಶ ಪಡೆದಿರುವ ವಂಚಕರು ಅದರಲ್ಲಿನ ಡಾಟಾಬೇಸ್ ಅನ್ನು ಬದಲಿಸಿ ಬೇರೆ ಬೇರೆ ಖಾತೆಗಳಿಗೆ ಹಣ ವರ್ಗಾಯಿಸಿಕೊಂಡಿರುವುದಾಗಿ ಪ್ರಕರಣದ ತನಿಖೆ ನಡೆಸುತ್ತಿರುವ ಪೋಲೀಸರು ತಿಳಿಸಿದ್ದಾರೆ.

## ಆನ್‌ಲೈನ್‌ನಲ್ಲಿ ಅರೆಕಾಲಿಕ ಉದ್ಯೋಗದ ಆಫರ್, ರೂ. ೯.೩೫ ಲಕ್ಷ ಕಳೆದುಕೊಂಡ ಆರ್ಥಿಕ ಸಲಹೆಗಾರ



ಟೆಲಿಗ್ರಾಂ ನಲ್ಲಿ ವಂಚಕ ಅರೆಕಾಲಿಕ ಉದ್ಯೋಗದ ಆಫರ್ ನೀಡುವುದಾಗಿ ಸಂದೇಶ ಕಳುಹಿಸಿದ್ದು, ಈ ಲಿಂಕ್ ಕ್ಲಿಕ್‌ಮಾಡಿದ ಬಳಿಕ ಸಂತ್ರಸ್ತ ಖಾತೆಯಿಂದ ಲಕ್ಷ ರೂ. ಗಳನ್ನು ಕಳೆದುಕೊಂಡಿದ್ದಾನೆ.

## ಪವರ್ ಬಿಲ್ ವಂಚನೆ ಪ್ರಕರಣ: ರೂ. ₹8.6 ಲಕ್ಷ ಕಳೆದುಕೊಂಡ 87 ವರ್ಷದ ವ್ಯಕ್ತಿ



ವ್ಯಕ್ತಿಯೊಬ್ಬರಿಗೆ ತಮ್ಮ ಮನೆಯ ಬಿಲ್ ಕಟ್ಟದ ಕಾರಣ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುವುದು ಎಂಬ ಸಂದೇಶವನ್ನು ಸ್ವೀಕರಿಸುತ್ತಾರೆ. ಸಂದೇಶದಲ್ಲಿ ಬಂದ ಲಿಂಕ್ ಬಳಸಿ ಆನ್‌ಲೈನ್‌ಮೂಲಕ ಬಿಲ್ ಪಾವತಿಗೆ ಮುಂದಾದ ವ್ಯಕ್ತಿ ನಿಮಿಷಗಳಲ್ಲಿ ತನ್ನ ಖಾತೆಯಲ್ಲಿದ್ದ ರೂ.೮.೬ ಲಕ್ಷ ಮೊತ್ತವನ್ನು ಕಳೆದುಕೊಂಡ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.

## ವಾಟ್ಸಾಪ್ ಮೂಲಕ ಅರೆಕಾಲಿಕ ಉದ್ಯೋಗ: ರೂ.70 ಲಕ್ಷ ಕಳೆದುಕೊಂಡ ಗುರುಗ್ರಾಮ್ ನಿವಾಸಿ

ನಿಯೋಜಿತ ಕೆಲಸವನ್ನು ಪೂರ್ಣಗೊಳಿಸಲು ರೂ 10,000 ಗಳಿಸಿದ ವ್ಯಕ್ತಿ ವಂಚಕರನ್ನು ನಂಬಲು ಪ್ರಾರಂಭಿಸಿದನು. ಕ್ರಮೇಣ, ವಂಚಕರು ವ್ಯಕ್ತಿಯನ್ನು ಉತ್ತಮ ಆದಾಯಕ್ಕಾಗಿ ಹಣವನ್ನು ಹೂಡಿಕೆ ಮಾಡಲು ಮನವೊಲಿಸಿದರು. ಸಂತ್ರಸ್ತೆ ನಂತರ ಫೆಬ್ರವರಿ ಮತ್ತು ಮೇ ನಡುವೆ 20 ವಹಿವಾಟುಗಳ ಮೂಲಕ ರೂ.69.9 ಲಕ್ಷ ಗಳನ್ನುವಂಚಕರು ಹೇಳಿದ ಖಾತೆಗಳಿಗೆ ವರ್ಗಾಯಿಸಿದನು. ಆದರೆ ಮೊತ್ತವನ್ನು ಹಿಂಪಡೆಯಲು ಅವರಿಗೆ ಅವಕಾಶವಿರಲಿಲ್ಲ. ನಂತರ ಸಂತ್ರಸ್ತೆ ಹತ್ತಿರದ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲು ಮುಂದಾದಾಗ ತಾನು ಮೋಸಹೋಗಿರುವುದು ತಿಳಿದುಬಂದಿದೆ.

## ಹೆಚ್ಚುವರಿ ಆದಾಯದ ನೆಪದಲ್ಲಿ ಖಾಸಗಿ ಕಂಪನಿಯ ಡಿಜಿಎಂಗೆ 30 ಲಕ್ಷ ರೂ. ವಂಚಿಸಿದ ಸೈಬರ್ ವಂಚಕರು



ಸೈಬರ್ ವಂಚಕರು ಖಾಸಗಿ ಸಂಸ್ಥೆಯ ಡೆಪ್ಯುಟಿ ಜನರಲ್ ಮ್ಯಾನೇಜರ್ ಅವರಿಗೆ ಹೆಚ್ಚುವರಿ ಹಣವನ್ನು ಗಳಿಸಲು ಯೂಟ್ಯೂಬ್ ಚಂದಾದಾರಿಕೆಯ ಪ್ರಿ-ಪೇಯ್ಡ್ ಟಾಸ್ಕ್ ನೀಡುವ ಮೂಲಕ ವಂಚಿಸಿದ್ದಾರೆ.

# Online Frauds

## Cyber gang cheating people by booking fake appointments at Delhi-NCR hospitals busted



Fraudster who allegedly created fake websites of renowned hospitals in Delhi-NCR and cheated hundreds of people by offering fraudulent appointment bookings and consultation. Victim has been cheated of nearly Rs 1 lakh after being asked to install an app to book a hospital appointment.

## 14 lakhs looted from youth by cyber criminals.



The victim was approached by an unknown person who offered him a part-time job. After the victim deposited the amount, the accused broke contact without giving any benefit.

## PU peon loses ₹7L in online fraud



Victim lost the huge amount of money on the promise of getting high profit on investing money online. After winning his trust, the cheaters told victim to invest the money in multiple chunks. Finally, victim realised that it's a scam when he didn't get the money back.

## 'Blescoin' scam: Lured by woman cyber fraudster on marriage portal, techie duped of Rs 91.75 lakh

A woman cyber fraudster allegedly duped a techie in Pune to the tune of Rs 91.75 lakh by luring him on the false promise of marriage. The accused told the complainant that she was residing in Malaysia. She made the complainant transfer for fraudulent business after assuring him of marriage. The complainant is an engineer working with an IT company.

## Cyber crook dupes city firm of Rs 14cr by manipulating QR code

The accused might have blocked or hacked the payment gateway of the affected Bhubaneswar-based fintech company. They fraudulently diverted Rs 14.33 crore to more than 125 different bank accounts from the payout wallet.

## Offered franchise of pizza chain during cricket World Cup, Pune man loses Rs 1 crore to cyber criminals.




The complainant was made to do over a dozen transactions to multiple bank accounts on various pretexts related to opening the franchise outlets of the pizza restaurant chain in Mumbai and Pune during the World Cup and also one at the Pune International Airport. Officials investigating the case said multiple cases of similar cyber frauds have been reported from across India in the recent past in which the name of the same pizza restaurant chain was used for duping people on pretext of giving franchise outlets.

# Online Frauds

## Cyber frauds siphon off ₹25 crore from Thane-based firm after hacking their financial portal



The hackers breached the payment gateway of the company, changed it's database, increased the wallet balances and with merchant credentials logged into the company's portal and carried out transactions to different bank accounts.

## Mumbai Financial Advisor Falls Victim To Cyber Fraud That Offered Online Job Opportunity, Loses Rs 9.35 Lakh;



The victim lost the huge money after clicking on a Telegram link sent by a person who offered him a part-time job of rating hotels.

## FPJ Cyber Secure: 87-year-old Loses ₹8.6 Lakh in Power Bill Fraud



A man lost lakhs of money in a span of minutes in seven different transactions after falling prey to power bill fraud. The victim received a text message on his phone informing that his last electricity bill had not been updated and hence his house's power supply would be disconnected.

## Cyber Fraud: How Gurugram Resident Lost Rs 70 Lakh To Work From Home Scam On WhatsApp

The man started trusting the scammers as he earned Rs 10,000 for completing the task assigned. Gradually, the scammers persuaded the victim to invest money for better returns. The victim then transferred Rs 69.9 lakh via 20 transactions between February and May but he was not allowed to withdraw the amount. The victim then lodged a complaint.

## DGM Of Private Company Duped Of Rs 30 Lakh By Cyber Crooks On Pretext Of Extra Income




A deputy general manager of a private firm was duped by giving a YouTube subscription pre-paid task to earn extra money.

- ಡಿಜಿಟಲ್ ಡಿಫೆಂಡರ್ಸ್ CTF 2023 ಸ್ಪರ್ಧೆಯ ವಿಜೇತರನ್ನು ಘೋಷಿಸಲಾಗಿದೆ.










- ದಿನಾಂಕ ೨೪ನೇ ಜುಲೈ ೨೦೨೩ ರಿಂದ ೨೯ನೇ ಜುಲೈ ೨೦೨೩ ರವರೆಗೆ, ರಾಜ್ಯದ ಎಲ್ಲಾ ಎಂಜಿನಿಯರಿಂಗ್ ಕಾಲೇಜುಗಳ ಆಯ್ದ ಉಪನ್ಯಾಸಕರುಗಳಿಗೆ ನೆಟ್ವರ್ಕ್ ಭದ್ರತೆಯ ಕುರಿತು ಉಪನ್ಯಾಸಕರ ಅಭಿವೃದ್ಧಿ ಕಾರ್ಯಕ್ರಮವನ್ನು (FDP) ಚಿತ್ರದುರ್ಗದ, ಚಳ್ಳಕೆರೆಯಲ್ಲಿನ IISc ಕ್ಯಾಂಪಸ್‌ನಲ್ಲಿ ನಡೆಸಲಾಯಿತು.



- H.A.C.K ಕೊಹಾರ್ಟ್-3: ಕೆಎಸ್‌ಸಿಎಸ್‌ಟಿಯ ಪಿಐಸಿ ಸೆಲ್ ಸಹಯೋಗದೊಂದಿಗೆ "ಸ್ಟಾರ್ಟ್‌ಅಪ್‌ಗಳಿಗಾಗಿ ಐಪಿಯ ಇಂಟರ್‌ಫೇಸ್" ಕುರಿತು ಕಾರ್ಯಾಗಾರ ನಡೆಸಲಾಯಿತು.




- ELCIA (ಎಲೆಕ್ಟ್ರಾನಿಕ್ಸ್ ಸಿಟಿ ಇಂಡಸ್ಟ್ರೀಸ್ ಅಸೋಸಿಯೇಷನ್) ಸಹಯೋಗದೊಂದಿಗೆ "MSME ಗಳಿಗೆ IT ಮತ್ತು OT ಭದ್ರತೆಯ ಮೂಲಭೂತ ಅಂಶಗಳ" ಕುರಿತು ಕಾರ್ಯಾಗಾರ ನಡೆಸಲಾಯಿತು.



- **CySecK announced winners of the 'Digital defenders CTF 2023.**










- **CySeck conducted Faculty Development Programme (FDP) on Network Security for Engineering College Lecturers from 24th to 29th July 2023 at IISc. Challakere campus, Chitradurga**



- **H.A.C.K. Cohort-3: Workshop on “Interface of IP’s for startups” in association with KSCST’s**




- **Workshop on “Fundamentals of IT & OT security for MSMEs” in association with ELCIA (Electronics City Industries Association)**



# ಉಪಯುಕ್ತ ಲಿಂಕ್‌ಗಳು | Useful links

**ಸೈಬರ್ ಜಾಗೃತಿ ಮತ್ತು ಸೈಬರ್ ಸುರಕ್ಷಿತವಾಗಿರಲು ಕೆಲವು ಉಪಯುಕ್ತ ಲಿಂಕ್‌ಗಳು ಇಲ್ಲಿವೆ-**

- ಸೈಬರ್ ವಂಚನೆಗಳ ಬಗ್ಗೆ ದೂರು ದಾಖಲಿಸಲು **cybercrime.gov.in**
- ತಪ್ಪು ಮಾಹಿತಿ ಗುರುತಿಸಲು - **https://factcheck.ksp.gov.in**
- ಕರ್ನಾಟಕ ಸೈಬರ್ ಅಪರಾಧ ಸಹಾಯವಾಣಿ ಸಂಖ್ಯೆ 112
- ರಾಷ್ಟ್ರೀಯ ಸಹಾಯವಾಣಿ 1930 ಗೆ ಕರೆ ಮಾಡಿ

**Some useful links for staying cyber aware and cyber safe -**

- **To lodge complaint against a cyber-crime - cybercrime.gov.in**
- **To identify fake information: https://factcheck.ksp.gov.in**
- **Karnataka Cyber Crime Helpline Number 112**
- **National Helpline Number 1930**



# ನಮ್ಮ ಬಗ್ಗೆ | About CySecK

Centre of Excellence for Cyber Security

ಸೈಸೆಕ್ (CySecK) ಎಂಬುದು ಸೈಬರ್ ಸೆಕ್ಯುರಿಟಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಉನ್ನತಜ್ಞಾನ ಕೇಂದ್ರವಾಗಿದೆ (ಸೆಂಟರ್ ಆಫ್ ಎಕ್ಸಲೆನ್ಸ್ ,ಸಿಒಇ). ಇದು ಐಐಎಸ್ಸಿ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್) ಸಂಸ್ಥೆಯ ಆವರಣದಲ್ಲಿದೆ. ಐಐಎಸ್ಸಿಯು ಇದರ ಆಂಕರ್ ಸಂಸ್ಥೆಯಾಗಿದ್ದು , ಕೆಎಸ್ಸಿಎಸ್ಟಿ (ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ) ಇದರ ಅನುಷ್ಠಾನ ಸಂಸ್ಥೆಯಾಗಿರುತ್ತದೆ. ಸೈಸೆಕ್ ಅನ್ನು ಕರ್ನಾಟಕ ಸರ್ಕಾರದ ಐಟಿ, ಬಿಟಿ ಎಸ್ ಟಿ ವಿಭಾಗದ ಕರ್ನಾಟಕ ಸೃಜನಶೀಲತೆ ಮತ್ತು ತಂತ್ರಜ್ಞಾನ ಸೊಸೈಟಿ (ಕರ್ನಾಟಕ ಇನ್ನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ) ಸ್ಥಾಪಿಸಿದೆ.

CySecK is the Karnataka state government’s K-tech Centre of Excellence in Cybersecurity, housed in the IISc (Indian Institute of Science) campus, with IISc as the anchor institute and KSCST (Karnataka State Council for Science and Technology) as the implementation agency. CySecK was setup by KITS (Karnataka Innovation and Technology Society) of the Department of IT, BT and S&T.